**ದಿನಾಂಕ 22.06.2016ರಂದು ನೀರು ಶುದ್ಧೀಕರಣ ಘಟಕಗಳ ಅನುಷ್ಠಾನ ಕುರಿತು ಪ್ರಗತಿ ಪರಿಶೀಲನೆ ನಡೆಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆಸಿದ ವಿಡಿಯೋ ಸಂವಾದದ ನಡವಳಿಗಳು:**

ರಾಜ್ಯದ ಸಮಸ್ಯಾತ್ಮಕ ಗ್ರಾಮೀಣ ಜನವಸತಿಗಳಲ್ಲಿ 7000 ನೀರು ಶುದ್ಧೀಕರಣ ಘಟಕಗಳನ್ನು ವಿವಿಧ ಮಾದರಿಯಲ್ಲಿ ಅನುಷ್ಠಾನ ಮಾಡಲು ಸರ್ಕಾರದ ಅನುಮೋದನೆ ನೀಡಲಾಗಿದ್ದು, ಈ ಪೈಕಿ ಕಾರ್ಯಚರಣೆಗೊಂಡು ಸಾರ್ವಜನಿಕ ಬಳಕೆಯಲ್ಲಿರುವ ಎಲ್ಲಾ ನೀರು ಶುದ್ಧೀಕರಣ ಘಟಕಗಳನ್ನು **ದಿನಾಂಕ:01.07.2016ರಂದು ಮಾನ್ಯ ಮುಖ್ಯಮಂತ್ರಿಗಳು** ಲೋಕಾರ್ಪಣೆ ಮಾಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಈಗಾಗಲೇ ಅನುಮೋದಿಸಿರುವ ನೀರು ಶುದ್ಧೀಕರಣ ಘಟಕಗಳನ್ನು **ಜೂನ್ 30, 2016ರೊಳಗೆ** ಸಮರೋಪಾದಿಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಅಧ್ಯಕ್ಷತೆಯಲ್ಲಿ ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಣಾಧಿಕಾರಿಗಳು, ಗ್ರಾ.ಕು.ನೀ&ನೈ.ವಿಭಾಗಗಳ ಕಾರ್ಯಪಾಲಕ ಅಭಿಯಂತರರು ಮತ್ತು ಸಹಕಾರ ಸಂಘಗಳ ಉಪ ನಿಬಂಧಕರೊಂದಿಗೆ ವಿಡಿಯೋ ಸಂವಾದವನ್ನು ನಡೆಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ಈ ಸಂದರ್ಭದಲ್ಲಿ ಮುಖ್ಯ ಕಾರ್ಯನಿರ್ವಾಣಾಧಿಕಾರಿಗಳೊಂದಿಗೆ, ಜಿಲ್ಲೆಗಳಿಗೆ ನಿಗದಿಪಡಿಸಲಾಗಿರುವ ನೀರು ಶುದ್ಧೀಕರಣ ಘಟಕಗಳ ಅನುಷ್ಠಾನ ಕುರಿತು ಪ್ರಗತಿ ಪರಿಶೀಲನೆ ನಡೆಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ&ನೈ.ವಿಭಾಗರವರು **ದಿನಾಂಕ:30.06.2016ರೊಳಗಾಗಿ** ಪೂರ್ಣಗೊಳಿಸಿರುವ ನೀರು ಶುದ್ಧೀಕರಣ ಘಟಕಗಳ **ಅನುಬಂಧ-1ರಲ್ಲಿ** ಅಡಕವಿರಿಸಿದೆ.

ಈಗಾಗಲೇ ಸರ್ಕಾರದಿಂದ ಅನುಮೋದನೆಗೊಂಡು ವಿವಿಧ ಹಂತಗಳಲ್ಲಿರುವ ನೀರು ಶುದ್ಧೀಕರಣ ಘಟಕಗಳ ಅನುಷ್ಠಾನ ಪ್ರಕ್ರಿಯೆಯನ್ನು ತೀವ್ರಗೊಳಿಸಿ **ಜೂನ್ 2016ರ ಅಂತ್ಯದೊಳಗೆ ಕಡ್ಡಾಯವಾಗಿ** ಪೂರ್ಣಗೊಳಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಣಾಧಿಕಾರಿಗಳು, ಗ್ರಾ.ಕು.ನೀ&ನೈ.ವಿಭಾಗಗಳ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರಿಗೆ ಸೂಚಿಸಲಾಯಿತು.

- ಈಗಾಗಲೇ ಟೆಂಡರ್‌ನಲ್ಲಿ ಅನುಮೋದನೆಯಾಗಿ ನೀರು ಶುದ್ಧೀಕರಣ ಘಟಕಗಳನ್ನು ಅನುಷ್ಠಾನಗೊಳಿಸುತ್ತಿರುವ ಅನುಮೋದಿತ ಸಂಸ್ಥೆಗಳಿಗೆ ಸಂಗ್ರಹಣಾ ಮುಂಗಡ (Mobilisation Advance) ಅನುದಾನವನ್ನು ಕೂಡಲೇ ಅನುಮೋದಿತ ಸಂಸ್ಥೆಗಳಿಗೆ ಬಿಡುಗಡೆಯಾಗಿರುವ ಅನುದಾನದಲ್ಲಿ / NRDWP C&Q ಅನುದಾನದಡಿಯಲ್ಲಿ ಬಿಡುಗಡೆ ಮಾಡಲು ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು ಹಾಗೂ ನೀರು ಶುದ್ಧೀಕರಣ ಘಟಕಗಳನ್ನು ಅನುಷ್ಠಾನ ಮಾಡಿ **ದಿನಾಂಕ:30.06.2016ರೊಳಗೆ** ಲೋಕಾರ್ಪಣೆ ಮಾಡಲು ತಿಳಿಸಲಾಯಿತು.

- PPP ಮಾದರಿಯಲ್ಲಿ ಅನುಮೋದನೆಯಾಗಿರುವ SCOTMAS Limited ಮತ್ತು Dowac Systems & Projects India Private Limited ಸಂಸ್ಥೆಗಳು ನಿಗದಿತ ಅವಧಿಯಲ್ಲಿ ಇದುವರೆವಿಗೂ ನೀರು ಶುದ್ಧೀಕರಣ ಘಟಕಗಳನ್ನು ಅನುಷ್ಠಾನ ಮಾಡದೇ ಇರುವ ಕಾರಣ, ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಒಡಂಬಡಿಗೆ/ ಕರಾರು ಪತ್ರದಲ್ಲಿನ ಷರತ್ತುಗಳನ್ವಯ, ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿಯಮಾನುಸಾರ ಪರಿಶೀಲಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಕರಾರು ರದ್ದು ಪಡಿಸಲು ಅಗತ್ಯ ಜರೂರು ಕ್ರಮವಹಿಸಲು ಸೂಚಿಸಲಾಯಿತು.

- **ದಿನಾಂಕ:30.06.2016**ರೊಳಗೆ ಅನುಷ್ಠಾನಗೊಳಿಸುವ ನೀರು ಶುದ್ಧೀಕರಣ ಘಟಕಗಳ ವಿವರವನ್ನು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ, **ದಿನಾಂಕ:23.06.2016**ರೊಳಗೆ ಸರ್ಕಾರಕ್ಕೆ ವರದಿ ಸಲ್ಲಿಸಲು ಹಾಗೂ ಸದರಿ ನೀರು ಶುದ್ಧೀಕರಣ ಘಟಕಗಳ ವಿವರವನ್ನು **ಕಡ್ಡಾಯವಾಗಿ** ಇಲಾಖೆಯ **www.shuddhaneeru7000.com** ವೆಬ್‌ಸೈಟ್‌ನಲ್ಲಿ ಅಳವಡಿಸಲು ಸಹಾ ಸೂಚಿಸಲಾಯಿತು
- ಎಲ್ಲಾ ಮಾದರಿಯ ನೀರು ಶುದ್ಧೀಕರಣ ಘಟಕಗಳನ್ನು **ದಿನಾಂಕ:30.06.2016**ರೊಳಗೆ ಅನುಷ್ಠಾನ ಮಾಡಿ ಸಾರ್ವಜನಿಕ ಬಳಕೆಗೆ ಲೋಕಾರ್ಪಣೆ ಮಾಡಲು ಸೂಚಿಸಲಾಯಿತು.

(ಡಾ॥ ಎನ್. ನಾಗಾಂಬಿಕಾ ದೇವಿ)
ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಗಳು:**

1. ಆಯುಕ್ತರು ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರ ಮಾಹಿತಿಗಾಗಿ
2. ಮುಖ್ಯ ಇಂಜನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
3. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-1.
4. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರ ಮಾಹಿತಿಗಾಗಿ
5. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ರಾಜ್ಯದ ಎಲ್ಲಾ (4) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತಗಳ ಅಧೀಕ್ಷಕ ಅಭಿಯಂತರರು,
7. ರಾಜ್ಯದ ಎಲ್ಲಾ (30) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
8. ರಾಜ್ಯದ ಎಲ್ಲಾ ಸಹಕಾರ ಸಂಘ/ಸಂಸ್ಥೆಗಳ ಉಪನಿಬಂಧಕರುಗಳು, ಸಹಕಾರ ಇಲಾಖೆ.
9. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತಶಾಖೆಗೆ.

# ಅನುಬಂಧ-1

## ರಾಜ್ಯದ ಗ್ರಾಮೀಣ ಜನವಸತಿಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ನೀರು ಶುದ್ಧೀಕರಣ ಘಟಕಗಳ ವಿವರ

ದಿನಾಂಕ:22.06.2016

| ಕ್ರ ಸಂ. | ಜಿಲ್ಲೆ | ಅನುಮೋದನೆ ನೀಡಲಾಗಿರುವ ಘಟಕಗಳು | ಕಾರ್ಯಾದೇಶ ನೀಡಿರುವ ಘಟಕಗಳು | ಕಾಮಗಾರಿ ಪ್ರಾರಂಭ ಮಾಡಿರುವ ಘಟಕಗಳು | ಇದುವರೆಗೂ ಕಾಮಗಾರಿ ಪ್ರಾರಂಭ ಮಾಡದೇ ಇರುವ ಘಟಕಗಳು | ನಿವೇಶನ ಲಭ್ಯವಿರುವ ಘಟಕಗಳು | ಪ್ರಗತಿಯಲ್ಲಿರುವ ಘಟಕಗಳು | ದಿನಾಂಕ:22.06.2016 ರವರಗೆ ಅಳವಡಿಸಿರುವ ಘಟಕಗಳು (Installed) | ದಿನಾಂಕ:22.06.2016 ರವರಗೆ ಕಾರ್ಯಾಚರಣೆಯಲ್ಲಿರುವ ಘಟಕಗಳು (Commissioned) | ದಿನಾಂಕ:30.06.2016 ಕ್ಕೆ ಒಟ್ಟಾರೆಯಾಗಿ ಅಳವಡಿಸಲಾಗುವ ಘಟಕಗಳು | ದಿನಾಂಕ:30.06.2016 ಕ್ಕೆ ಒಟ್ಟಾರೆಯಾಗಿ ಕಾರ್ಯಾಚರಣೆಗೊಳಿಸುವ ಘಟಕಗಳು | ಬಾಕಿ ಉಳಿಯುವ ಘಟಕಗಳ ಸಂಖ್ಯೆ | ಪೂರ್ಣಗೊಳಿಸುವ ನಿರೀಕ್ಷಿತ ದಿನಾಂಕ |
|---|---|---|---|---|---|---|---|---|---|---|---|---|---|
| 1 | ಬಾಗಲಕೋಟೆ | 297 | 297 | 297 | 0 | 297 | 107 | 242 | 190 | 297 | 297 | 0 | |
| 2 | ಬೆಂಗಳೂರು(ನ) | 201 | 201 | 95 | 106 | 193 | 83 | 72 | 18 | 105 | 102 | 99 | 30-07-2016 |
| 3 | ಬೆಂಗಳೂರು(ಗ್ರಾ) | 130 | 80 | 80 | 0 | 80 | 30 | 56 | 44 | 72 | 72 | 58 | 10-07-2016 |
| 4 | ಬೆಳಗಾಂ | 588 | 557 | 544 | 44 | 544 | 124 | 412 | 262 | 467 | 317 | 271 | 31-07-2016 |
| 5 | ಬಳ್ಳಾರಿ | 338 | 338 | 223 | 3 | 226 | 72 | 207 | 197 | 210 | 210 | 128 | 13-08-2016 |
| 6 | ಬೀದರ್ | 188 | 188 | 135 | 53 | 183 | 109 | 31 | 31 | 56 | 56 | 132 | 15-08-2016 |
| 7 | ವಿಜಯಪುರ | 398 | 398 | 386 | 0 | 385 | 157 | 240 | 229 | 257 | 257 | 141 | 31-07-2016 |
| 8 | ಚಾಮರಾಜನಗರ | 155 | | 60 | | 60 | 49 | 11 | | 60 | 60 | 95 | |
| 9 | ಚಿಕ್ಕಬಳ್ಳಾಪುರ | 374 | 296 | 265 | 93 | 319 | 125 | 195 | 195 | 195 | 247 | 127 | 31-07-2016 |
| 10 | ಚಿಕ್ಕಮಗಳೂರು | 106 | 102 | 62 | 40 | 96 | 48 | 19 | 14 | 53 | 53 | 53 | 20-07-2016 |
| 11 | ಚಿತ್ರದುರ್ಗ | 472 | 472 | 431 | 41 | 471 | 176 | 281 | 255 | 301 | 291 | 181 | 30-07-2016 |
| 12 | ದಕ್ಷಿಣ ಕನ್ನಡ | 86 | 70 | 61 | 25 | 20 | 45 | 0 | 0 | 60 | 60 | 26 | 30-07-2016 |
| 13 | ದಾವಣಗೆರೆ | 499 | 499 | 492 | 7 | 3 | 237 | 302 | 260 | 342 | 312 | 187 | 31-07-2016 |
| 14 | ಧಾರವಾಡ | 317 | 170 | 170 | 0 | 152 | 152 | 66 | 61 | 66 | 66 | 251 | |
| 15 | ಗದಗ | 234 | 232 | 221 | 11 | 221 | 22 | 199 | 199 | 218 | 218 | 16 | 31-07-2016 |
| 16 | ಕಲ್ಬುರ್ಗಿ | 318 | 318 | 284 | 93 | 55 | 110 | 153 | 63 | 170 | 111 | 207 | 01-08-2016 |
| 17 | ಹಾಸನ | 118 | 118 | 118 | 0 | 118 | 99 | 19 | 18 | 30 | 29 | 89 | 31-08-2016 |
| 18 | ಹಾವೇರಿ | 238 | 238 | 229 | 9 | 236 | 174 | 168 | 141 | 195 | 195 | 43 | 31-07-2016 |
| 19 | ಕೊಡಗು | 24 | 24 | 8 | 16 | 16 | 8 | 0 | 0 | 24 | 24 | 0 | |
| 20 | ಕೋಲಾರ | 505 | 464 | 306 | 187 | 307 | 95 | 143 | 141 | 270 | 270 | 235 | 31-07-2016 |
| 21 | ಕೊಪ್ಪಳ | 451 | 442 | 442 | 0 | 230 | 190 | 146 | 146 | 150 | 146 | 305 | 15-08-2016 |
| 22 | ಮಂಡ್ಯ | 541 | 238 | 235 | 306 | 518 | 53 | 181 | 181 | 212 | 212 | 329 | 30-10-2016 |
| 23 | ಮೈಸೂರು | 283 | 233 | 77 | 206 | 283 | 47 | 76 | 44 | 77 | 77 | 206 | 31-08-2016 |
| 24 | ರಾಯಚೂರು | 473 | 473 | 361 | 112 | 112 | 149 | 212 | 212 | 271 | 271 | 202 | 15-08-2016 |
| 25 | ರಾಮನಗರ | 177 | 164 | 3 | 91 | 177 | 14 | 4 | 0 | 42 | 42 | 135 | 31-07-2016 |
| 26 | ಶಿವಮೊಗ್ಗ | 165 | 165 | 70 | 95 | 164 | 60 | 10 | 10 | 81 | 81 | 84 | 31-07-2016 |
| 27 | ತುಮಕೂರು | 793 | 793 | 793 | 236 | 0 | 25 | 592 | 592 | 592 | 657 | 136 | 30-07-2016 |
| 28 | ಉಡುಪಿ | 8 | 8 | 8 | 0 | 8 | 1 | 7 | 7 | 8 | 8 | 0 | |
| 29 | ಉತ್ತರ ಕನ್ನಡ | 82 | 82 | 66 | 16 | 82 | 41 | 31 | 25 | 37 | 37 | 45 | |
| 30 | ಯಾದಗಿರಿ | 233 | 189 | 101 | 45 | 149 | 86 | 39 | 39 | 64 | 64 | 165 | 31-07-2016 |
| | ಒಟ್ಟು : | 8792 | 7849 | 6623 | 1835 | 5705 | 2688 | 4114 | 3574 | 4982 | 4842 | 3946 | |